ತುಮಕೂರು ಜಿಲ್ಲೆಯಲ್ಲಿ ರೈತರ ಬೆಳೆ ವಿಮೆ ಯೋಜನೆ

4676 (5398) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಈ ವರ್ಷ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಎಷ್ಟು ರೈತರು ಅರ್ಜಿ ಸಲ್ಲಿಸಿದ್ದಾರೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಸರಿಯಾದ ಪ್ರಚಾರ ಕೊಡದೇ ರೈತರಿಗೆ ಅನಾನುಕೂಲವಾಗಿ ಇನ್ನೂ ಸಾವಿರಾರು ರೈತರು ವಿಮೆ ಮಾಡಿಸಿಲ್ಲದಿರುವುದು ನಿಜವೆ; ಅದಕ್ಕೆ ಕಾರಣವೇನು?

ಇ) ತಾಲ್ಲೂಕು ಹೋಬಳಿ ಹಾಗೂ ಪಂಚಯತಿ ಮಟ್ಟದಲ್ಲಿ ಸರಿಯಾದ ವ್ಯವಸ್ಥೆ ಮೂಲಕ ಪ್ರಚಾರ ಮಾಡಿ ರೈತರಿಗೆ ತಿಳಿಸಲಾಗಿದೆಯೇ?

ಈ) ಇದರಲ್ಲಿ ಭ್ರಷ್ಟಾಚಾರ ನಡೆದಿರುವ ಪ್ರಕರಣ ಏನಾದರೂ ಇದೆಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ 2002–03ನೇ ಸಾಲಿನಲ್ಲಿ ಒಟ್ಟು 24,744 ರೈತರು ಬೆಳೆ ವಿಮಾ ಯೋಜನೆಯಡಿಯಲ್ಲಿ ಪಾಲ್ಗೊಂಡಿರುತ್ತಾರೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಹೌದು. ಬೆಳೆ ವಿಮಾ ಯೋಜನೆಯ ಬಗ್ಗೆ ಇಲಾಖಾ ಕರ ಪತ್ರ ಪೋಸ್ಟರ್, ದಿನಪತ್ರಿಕೆಗಳ ಮೂಲಕ ಹಾಗೂ ಇತರೆ ಸುದ್ದಿ ಮಾಧ್ಯಮಗಳ ಮುಖಾಂತರ ತಾಲ್ಲೂಕು ಹೋಬಳಿ ಮತ್ತು ಪಂಚಾಯತಿ ಮಟ್ಟದಲ್ಲಿ ವ್ಯಾಪಕ ಪ್ರಚಾರ ಮಾಡಲಾಗಿದೆ. ಅಲ್ಲದೆ, ಹೋಬಳಿ ಮಟ್ಟದಲ್ಲಿರುವ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ಯೋಜನೆಯ ಬಗ್ಗೆ ಅಗತ್ಯ ಮಾಹಿತಿ ನೀಡಲಾಗಿದೆ.

ಈ) ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಯಾವುದೇ ಭ್ರಷ್ಟಾಚಾರದ ಪ್ರಕರಣ ವರದಿಯಾಗಿರುವುದಿಲ್ಲ.

ತುರುವೇಕೆರೆ ತಾಲ್ಲೂಕು ಮಾದೀಹಳ್ಳಿ ಫಾರಂ ಅಭಿವೃದ್ಧಿ

4677 (5399) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಮಾದಿಹಳ್ಳಿ ಫಾರಂನ ಅಭಿವೃದ್ಧಿ ಕುಂಠಿತವಾಗಿರುವುದು ನಿಜವೇ;

ಆ) ಫಾರಂನಲ್ಲಿ ಬೆಳೆದಿರುವ ಅನೇಕ ತೋಟಗಾರಿಕೆ ಸಸಿಗಳಿಗೆ ನೀರಿಲ್ಲದೆ ಒಣಗುತ್ತಿರುವುದು ನಿಜವೇ;

ಇ) ಹೊಸ ಬೋರ್‌ವೆಲ್ ಕೊರೆದು ನೀರಿನ ವ್ಯವಸ್ಥೆ ಮಾಡದಿರಲು ಕಾರಣವೇನು; ನಿರ್ಲಕ್ಷ ಮಾಡಿ ಫಾರಂ ಈ ರೀತಿ ಆಗಲು ಕಾರಣರಾರು;

ಈ) ತಕ್ಷಣ ಹೊಸ ಬೋರ್‌ವೆಲ್‌ಗಳನ್ನು ಕೊರೆದು ನೀರು ಕೊಡಲಾಗುವುದೇ;

ಉ) ಯಾವಾಗ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಇಲ್ಲ.

ಅನುದಾನ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.